# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಸರ್ಕಾರದ ಕಾರ್ಯದರ್ಶಿಗಳಿಗಿಂತ ಕೆಳಹಂತದ ಅಧಿಕಾರಿಗಳಿಗೆ (ಸರ್ಕಾರದ ಅಧೀನ ಕಾರ್ಯದರ್ಶಿವರೆಗಿನ) ಮೊಬೈಲ್ ದೂರವಾಣಿ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಡಿಟಿಎನ್ 2011, ದಿನಾಂಕ:31-05-2011
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಡಿಟಿಎನ್ 2011, ದಿನಾಂಕ:07-12-2011
3) ಟಿಪ್ಪಣಿ ಸಂಖ್ಯೆ ಸಿಆಸುಇ ನಗದು-2/2012 ದಿನಾಂಕ:07-01-2012

ಪ್ರಸ್ತಾವನೆ:-

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರದ ಕಾರ್ಯದರ್ಶಿಗಳಿಗಿಂತ ಕೆಳಹಂತದ ಒಟ್ಟು 273 ಅಧಿಕಾರಿಗಳಿಗೆ (ಸರ್ಕಾರದ ಅಧೀನ ಕಾರ್ಯದರ್ಶಿವರೆಗಿನ) ಮಾಸಿಕ ರೂ.500/- (ರೂ. ಐದು ನೂರು ಮಾತ್ರ) ಗರಿಷ್ಠ ಮಿತಿಗೆ ಒಳಪಟ್ಟು ಮೊಬೈಲ್ ದೂರವಾಣಿ ವೆಚ್ಚವನ್ನು ಮರುಪಾವತಿ ಮಾಡಲು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ನಂತರ ಇದೇ ದರ್ಜೆಯ 63 ಅಧಿಕಾರಿಗಳಿಗೆ ಸದರಿ ಸೌಲಭ್ಯವನ್ನು ಒದಗಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀನ ಕಾರ್ಯದರ್ಶಿ ಹಾಗೂ ಮೇಲ್ದರ್ಜೆಯ ಅಧಿಕಾರಿಗಳಿಗೆ ಮತ್ತು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಕಾಲಕಾಲಕ್ಕೆ ಸೃಜನೆಯಾಗುವ ತತ್ಸಮಾನ ಅಧಿಕಾರಿಗಳಿಗೆ ಮಾಸಿಕ ರೂ. 500/- (ರೂ. ಐದು ನೂರು ಮಾತ್ರ) ಗರಿಷ್ಠ ಮಿತಿಗೆ ಒಳಪಟ್ಟು ಅವರ ಸ್ವಂತ ಮೊಬೈಲ್ ದೂರವಾಣಿ ವೆಚ್ಚವನ್ನು ಮರುಪಾವತಿಸಲು ಸೂಕ್ತ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರಮಾಂಕ (3) ರ ಟಿಪ್ಪಣಿಯಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ-2) ರವರು ಕೋರಿದ್ದು, ಈ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಡಿಟಿಎನ್ 2011, ಬೆಂಗಳೂರು, ದಿನಾಂಕ:16-04-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀನ ಕಾರ್ಯದರ್ಶಿ ಹಾಗೂ ಮೇಲ್ದರ್ಜೆಯ ಅಧಿಕಾರಿಗಳಿಗೆ ಮತ್ತು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಕಾಲಕಾಲಕ್ಕೆ ಸೃಜನೆಯಾಗುವ ತತ್ಸಮಾನ ಅಧಿಕಾರಿಗಳಿಗೆ ಮಾಸಿಕ ರೂ. 500/- (ರೂಪಾಯಿ. ಐದು ನೂರು ಮಾತ್ರ) ಗರಿಷ್ಠ ಮಿತಿಗೆ ಒಳಪಟ್ಟು ಅವರ ಸ್ವಂತ ಮೊಬೈಲ್ ದೂರವಾಣಿ ವೆಚ್ಚವನ್ನು ಮರುಪಾವತಿಸಲು ಸರ್ಕಾರ ಮಂಜೂರಾತಿ ನೀಡಿದೆ.

ಸರ್ಕಾರದ ಅಧೀನ ಕಾರ್ಯದರ್ಶಿ ವೃಂದದ ಅಧಿಕಾರಿಗಳು <u>ನಾಲ್ಕು ತಿಂಗಳಿಗೊಮ್ಮೆ</u> ಮೊಬೈಲ್ ದೂರವಾಣಿ ವೆಚ್ಚಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಅವಶ್ಯಕ ಪ್ರಮಾಣ ಪತ್ರದೊಂದಿಗೆ <u>ಸಿಆಸುಇ (ಲೆಕ್ಕಪತ್ರ)</u> ಶಾಖೆಗೆ ಸಲ್ಲಿಸಿ ಹಣ ಮರುಪಾವತಿ ಮಾಡಿಕೊಳ್ಳಬಹುದಾಗಿದೆ. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಅದಕ್ಕಿಂತ ಮೇಲ್ಪಟ್ಟ ದರ್ಜೆಯ ಅಧಿಕಾರಿಗಳು <u>ನಾಲ್ಕು ತಿಂಗಳಿಗೊಮ್ಮೆ</u> ಮೊಬೈಲ್ ದೂರವಾಣಿ ವೆಚ್ಚಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಅವಶ್ಯಕ ಪ್ರಮಾಣ ಪತ್ರದೊಂದಿಗೆ <u>ಸಿಆಸುಇ (ಕಾರ್ಯಕಾರಿ)</u> ಶಾಖೆಗೆ ಸಲ್ಲಿಸಿ ಹಣ ಮರುಪಾವತಿ ಮಾಡಿಕೊಳ್ಳಬಹುದಾಗಿದೆ.

ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ "2052-00-090-0-01-052" (ಯೋಜನೇತರ) ದೂರವಾಣಿ ವೆಚ್ಚಗಳು ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 897 ವೆಚ್ಚ-12/2012, ದಿನಾಂಕ:20-11-2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಲ್. ಗಂಗಾಧರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಕಾರ್ಯಕಾರಿ)

<u>ಗೆ:</u>

1) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು
2) ಖಜಾನಾಧಿಕಾರಿ, ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು
3) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
4) ಸರ್ಕಾರದ ಎಲ್ಲಾ ಅಪರ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು / ಅಧೀನ ಕಾರ್ಯದರ್ಶಿಗಳು / ಪಿ.ಎಸ್.ಗ್ರೇಡ್-1 (ಉಪ ಕಾರ್ಯದರ್ಶಿ ದರ್ಜೆ) / ಪಿ.ಎಸ್.ಗ್ರೇಡ್-2 (ಅಧೀನ ಕಾರ್ಯದರ್ಶಿ ದರ್ಜೆ)
5) ಸರ್ಕಾರದ ಉಪ ಕಾರ್ಯದರ್ಶಿ-2 ಆರ್ಥಿಕ ಇಲಾಖೆ (ವೆಚ್ಚ-12)
6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
9) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
10) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
11) ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
12) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಆಸುಇ (ಲೆಕ್ಕಪತ್ರ-1, 2 ಮತ್ತು 3)
13) ಸಂಬಂಧಪಟ್ಟವರೆಲ್ಲರಿಗೂ
14) ಕಛೇರಿ ಪ್ರತಿ 15) ಶಾಖಾ ರಕ್ಷಾ ಕಡತ 16) ಹೆಚ್ಚುವರಿ ಪ್ರತಿಗಳು